ಮೂಲ ದಾವೆ ನಂ.63/20221

PW-1

ದಿನಾಂಕಃ 13-02-2025.

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ SVK ವಕೀಲರಿಂದ ಃ**

ನನ್ನ ತಂದೆಯ ಹೆಸರು ದೇವಲಾ ನಾಯಕ, ನನ್ನ ತಾಯಿಯ ಹೆಸರು ಸೋಮ್ಲಾ ನಾಯಕ ಎಂದು ಇರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿಯ ಊರು ಬೈಲಾಪೂರ ತಾಂಡಾ ಎಂದರೆಸರಿ. ಸದರಿ ಬೈಲಾಪೂರ ತಾಂಡಾ ಹುಣಸಗಿ ತಾಲೂಕಿನಲ್ಲಿರುತ್ತದೆ ಎಂದರೆ ಸರಿ. ನನ್ನ ತಂದೆ ತಾಯಿಗೆ ಒಟ್ಟು 5 ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇರುತ್ತೇವೆ. ನಮ್ಮ ದೊಡ್ಡಣ್ಣನ ಹೆಸರು ನಾರಾಯಣ, ಎರಡನೇ ಅಣ್ಣನ ಹೆಸರು ಲಚಮಾ ನಾಯಕ, 3 ನೇ ಸಹೋದರನ ಹೆಸರು ಕೋಮ್ಲಾ ನಾಯಕ, 4 ನೇ ಸಹೋದರ ಹನುಮ ನಾಯಕ ಮತ್ತು 5 ನೇ ಸಹೋದರನ ಹೆಸರು ಫುಲಸಿಂಗ್ ನಾಯಕ ಎಂದು ಇರುತ್ತದೆ. ನಮ್ಮ ತಂದೆ ತಾಯಿ ಲಂಬಾಣಿ ಜಾತಿಗೆ ಸೇರಿದವರಾಗಿರುತ್ತಾರೆ ಎಂದರೆ ಸರಿ. ಮೃತ ಹನಮಂತ್ರಾಯ ಇವರು ಹರಿಜನ ಜಾತಿಗೆ ಸೇರಿದವರು ಎಂದರೆ ಸರಿ. ಸದರಿ ಹನಮಂತ್ರಾಯ ಇವರು ಊರು ಶಹಾಪೂರ ತಾಲೂಕಿನ ಬೀರನೂರು ಎಂದರೆ ಸರಿ. ಸದರಿ ಹನಮಂತ್ರಾಯನಿಗೆ ಅಶೋಕ ಎನ್ನುವ ಒಬ್ಬ ಸಹೋದರ ಇರುತ್ತಾನೆ ಎಂದರೆ ಸರಿ. ಸದರಿ ಅಶೋಕ ಇವರು ಸರ್ಕಾರಿ ನೌಕರನಾಗಿರುತ್ತಾನೆ ಎಂದರೆ ಸರಿ. ಈಗ ನನಗೆ ಅಂದಾಜು 50 ವರ್ಷ ವಯಸ್ಸಾಗಿರಬಹುದು. ವಾದ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮದುವರೆ ಹನಮಂತ್ರಾಯನ ಜೊತೆ ಆಗಿತ್ತು ಎಂದು ಹೇಳುವ ಕಾಲಕ್ಕೆ ನನ್ನ ವಯಸ್ಸು 20 ವರ್ಷ ಆಗಿತ್ತು. ಆ ಕಾಲಕ್ಕೆ ಹನಮಂತ್ರಾಯನ ವಯಸ್ಸು 28 ವರ್ಷ ಆಗಿತ್ತು. ನಮ್ಮ ಮದುವೆ ಲವ್ ಮ್ಯಾರೇಜ್ ಆಗಿರುತ್ತದೆ. ನಮ್ಮ ಮದುವೆ ನೊಂದಣಿ ಆಗಿರುವುದಿಲ್ಲ. ನಮ್ಮ ಮದುವೆಯ ಕಾಲಕ್ಕೆ ಸದರಿ ಹನಮಂತ್ರಾಯ ಇತನು ಸರ್ಕಾರಿ ನೌಕರನಾಗಿರಲಿಲ್ಲ ಅದರೆ ಖಾಸಗಿ ಕೆಲಸ ಮಾಡುತ್ತಿದ್ದನು. ಸದರಿ ಹನಮಂತ್ರಾಯ ಇತನು ರಸ್ತೆ

ನಿರ್ಮಾಣದ ಗುತ್ತೆದಾರ ಎಂದು ಕಲಬುರಗಿ ತಾಲೂಕಿನಲ್ಲಿ ಕೆಲಸ ಮಾಡುತ್ತಿದ್ದ. ನಮ್ಮ ಮದುವೆ ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮ ದೇವಸ್ಥಾನದಲ್ಲಿ ಆಗಿರುತ್ತದೆ. ನಮ್ಮ ಮದುವೆ ಹನಮಂತ್ರಾಯ ಇವರ ಜಾತಿಯ ಸಂಪ್ರದಾಯದಂತೆ ಮಾಡಿಕೊಂಡಿರುತ್ತೇವೆ. ನಮ್ಮ ಮದುವೆಯ ಕಾಲಕ್ಕೆ ಮಂತ್ರೋಚ್ಚಾರಣೆ ಮಾಡಿರುವ ಸ್ವಾಮಿ ಒಬ್ಬ ರಾಮಚಂದ್ರಪ್ಪ ಎನ್ನುವವರು ಮಾಡಿರುತ್ತಾರೆ. ಅವರು ಸವದತ್ತಿಯವರಾಗಿದ್ದರು. ಅವರು 10 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಸದರಿ ಹನಮಂತ್ರಾಯ ನಮ್ಮ ಅಕ್ಕನ ಮಗನ ಜೊತೆಗೆ ನಮ್ಮ ತಂದೆ ತಾಯಿಯ ಮನೆಗೆ ಬರುತ್ತಿದ್ದ ಾಕರಣ ಅತನ ಪರಿಚಯ ಆಗಿತ್ತು.  ನಮ್ಮ ಅಕ್ಕನ ಮಗ ತಿರುಪತಿ ಎನ್ನುವವರು ಮತ್ತು ಹನಮಂತ್ರಾಯ ಇವರಿಬ್ಬರು ಒಟ್ಟಿಗೆ ಗುತ್ತಿಗೆದಾರರು ಎಂದು ಕೆಲಸ ಮಾಡುತ್ತಿದ್ದರು. ನನ್ನ ಮತ್ತು  ಹನಮಂತ್ರಾಯನ ಮದುವೆ ಆಗುವದಕ್ಕಿಂತ ಮುಂಚೆ 2 ವರ್ಷಗಳಿಂದ ನಾವು ಒಬ್ಬರಿಗೊಬ್ಬರು ಪ್ರೀತಿ ಮಾಡುತ್ತಿದ್ದೇವು. ನನ್ನ ಮತ್ತು  ಹನಮಂತ್ರಾಯನ ಮದುವೆ ಲವ್ ಮ್ಯಾರೇಜ್ ಆಗಿರುತ್ತದೆ ಎಂದು ಈ ದಾವೆ ದಾಖಲಿಸು ವುದಕಿಂತ ಮುಂಚೆ  ನಮ್ಮ ವಕೀಲರಿಗೆ ಹೇಳಿದ್ದೆ.  ನಮ್ಮ ಮದುವೆಯೂದ 1 ವರ್ಷದ ನಂತರ 2 ನೇ ವಾದಿ ರಾಹುಲ್ ಜನಿಸಿದ. ರಾಹುಲ್ ಜನಿಸಿದ 2-3 ವರ್ಷದ ನಂತರ 3 ನೇ ವಾದಿ ಮಾರುತಿ ಜನಿಸಿರುತ್ತಾನೆ. ನಮ್ಮ ಮದುವೆಯಾದ 8 ವರ್ಷಗಳ ನಂತರ ಹನಮಂತ್ರಾಯ ಇವರಿಗೆ ಸರ್ಕಾರಿ ನೌಕರಿ ಸಿಕ್ಕಿರುತ್ತದೆ. ನಮ್ಮ ಮದುವೆಯಾದ ನಂತರ 3 ವರ್ಷಗಳೆ ನಾನು ಮತ್ತು ಹನಮಂತ್ರಾಯ ಇಬ್ಬರು ಕಲಬುರಿಗಿ ಜಿಲ್ಲೆಯ ಚಿಂಚೊಳ್ಳಿ ಪಟ್ಟಣದಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವು. ಆ ಮನೆಯ ಮಾಲಿಕನ ಹೆಸರು ನನಗೆ ಗೊತ್ತಿಲ್ಲ ಆದರೆ ಅವರು Muslim ಸಮುದಾಯಕ್ಕೆ ಸೇರಿದವರಾಗಿದ್ದರು. ನಾವು ಚಿಂಚೊಳ್ಳಿಯಲ್ಲಿ ವಾಸವಾಗಿದ್ದಾಗ  Voter Id ಕಾರ್ಡಗಳನ್ನು  ಪಡೆದುಕೊಂಡಿದ್ದೇವು.  ನಂತರ ನಾವು ಶೋರಾಪೂರಕ್ಕೆ ಬಂದಾಗ  ಅಲ್ಲಿ ಒಬ್ಬ ಆರ್.ಎಲ್. ನಾಯಕ ಇವರ ಮನೆಯಲ್ಲಿ ಬಾಡಿಗೆಯಿಂದ ವಾಸವಾಗಿದ್ದೇವು. ಸದರಿ ಮನೆಯಲ್ಲಿ ಅಂದಾಜು 2-3 ವರ್ಷಗಳವೆರೆಗೆ ವಾಸವಾಗಿದ್ದೇವು. ನಂತರದಲ್ಲಿ ನನ್ನ ಗಂಡನಿಗೆ ಸರ್ಕಾರಿ ನೌಕರಿ ಸಿಕ್ಕಿತ್ತು. ತದನಂತರ ಆರು ತಿಂಗಳಲ್ಲಿ ನಮಗೆ Quarters ಮಂಜೂರಾಗಿತ್ತು. ನಾನು ಆರ್.ಎಲ್. ನಾಯಕ ಇವರ ಮನೆಯಲ್ಲಿ ಬಾಡಿಗೆಯಿಂದ ವಾಸವಾಗಿದ್ದಾಗ ನಮ್ಮ ಚುನಾವಣಾ ಗುರುತಿನ ಚೀಟಿ ಪಡೆದುಕೊಂಡಿದ್ದೇವು. ಸಾಕ್ಷಿ ಸ್ವತಹ ಮುಂದುವೆರದು ನಾು

ಚಿಂಚೊಳ್ಳಿಯಲ್ಲಿನ ಚುನಾವಣಾ ಗುರುತಿನ ಚೀಟಿ ಬದಲಾವಾವಣೆ ಮಾಡಿಕೂಂಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ Voter ID ಮತ್ತು ಚುನಾವಣಾ ಮತದಾರ ಪಟ್ಟಿ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಈ ಗ ಸದ್ಯ ನಾವು ಶೋರಾಪೂರದಲ್ಲಿ ಒಬ್ಬ ವಿಷ್ಣುವರ್ಧನ ಇವರ ಮನೆಯಲ್ಲಿ ಬಾಡಿಗೆಯಿಂದ ವಾಸವಾಗಿರುತತೇವೆ. ನನ್ನ ಆಧಾರ ಕಾರ್ಡನಲ್ಲಿ ಶೋರಾಪೂರದ ಸರ್ಕಾರಿ Quarters ವಿಳಾಸವಿರುತ್ತದೆ. ಆ ವಿಳಾಸ ನಾವು ಬದಲಾವಣೆ ಮಾಡಿಕೊಂಡಿರುವುದಿಲ್ಲ. ಸದರಿ ವಿಷ್ಣುವರ್ಧನ ಇವರ ಮನೆಯಲ್ಲಿ ಕಳೆದ 4 ವರ್ಷಗಳಿಂದ ಬಾಡಿಗೆಯಿಂದ ಇರುತ್ತೇವೆ. ಸದರಿ ವಿಷ್ಣುವರ್ಧನ ಇವರು ಜೀವಂತ ಇರುತ್ತಾರೆ. ಸದರಿ ವಿಷ್ಣುವರ್ಧನ ಇವರ ಮನೆಯು ಸರ್ಕಾರಿ Quarters ನಿಂದ ಅಂದಾಜು 3 ಕಿ.ಮಿ. ದೂರದಲ್ಲಿ ಇರುತ್ತದೆ. 2 ನೇ ಮತ್ತು 3 ನೇ ವಾದಿಯರು ರಾಹುಲ್ ಮತ್ತು ಮಾರುತಿ ಶೋರಾಪೂರದಲ್ಲಿ ಜನಿಸಿರುತ್ತಾರೆ. 2 ಮತ್ತು 3 ನೇ ವಾದಿಯರ ಜನಿಸುವ ಕಾಲಕ್ಕೆ ನನ್ನ ಹೆರಿಗೆ ಮನೆಯಲ್ಲಿಯೇ ಆಗಿರುತ್ತದೆ. 2 ನೇ ವಾದಿ ರಾಹುಲ್ ಇತನನ್ನು ಶೋರಾಪೂರದಲ್ಲಿ Vinayak ಎನ್ನುವ English Medium School ನಲ್ಲಿ LKG ಯಿಂದ ಶಾಲೆಗೆ Admit ಮಾಡಿರುತ್ತೇವೆ. ಸದರಿ ರಾಹುಲ್ ಇತನು 1 ರಿಂದ 9 ನೇ ತರಗತಿಯವರೆಗೆ Vinayak ಎನ್ನುವ English Medium School ನಲ್ಲಿ ಓದಿರುತ್ತಾನೆ. ನನ್ನ ಗಂಡನೇ ರಾಹುಲ್ ನನ್ನು ಶಾಲೆಗೆ ಸೇರಿಸಿರುತ್ತಾನೆ. 3 ನೇ ವಾದಿ ಮಾರುತಿ ಇತನನ್ನು ಶೋರಾಪೂರದಲ್ಲಿ Vinayak ಎನ್ನುವ English Medium School ನಲ್ಲಿ LKG ಯಿಂದ ಶಾಲೆಗೆ Admit ಮಾಡಿರುತ್ತೇವೆ. ಸದರಿ ಮಾರುತಿ ಇತನು 1 ರಿಂದ 8 ನೇ ತರಗತಿಯವರೆಗೆ Vinayak ಎನ್ನುವ English Medium School ನಲ್ಲಿ ಓದಿರುತ್ತಾನೆ. ನನ್ನ ಗಂಡನೇ ವಾರುತಿನ್ನು ಶಾಲೆಗೆ ಸೇರಿಸಿರುತ್ತಾನೆ. ನನ್ನ ಗಂಡ ಶಹಾಪೂರದ ಸ್ಪಂದನ ಆಸ್ಪತ್ರೆಯಲ್ಲಿ ಸುಮಾರು 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾನೆ. ದಿಾನಂಕ ನನಗೆ ನಿಖರವಾಗಿ ಗೊತ್ತಿಲ್ಲ. ಆದರೆ ಆಗ ಮಳೆಗಾಲ ಇದ್ದಿತ್ತು. ಶಹಾಪೂರ ಸರ್ಕಾರಿ ಆಸ್ಪತ್ರೆಯಲ್ಲಿ ಮೊದಲಿಗೆ ನನ್ನ ಗಂಡನಿಗೆ ಕೋರೋನಾ ಬಂದಿರುತ್ತದೆ ಎಂದು ಹೇಳಿದ್ದರು ನಂತರ ಅವರನ್ನು ಯಾದಗಿರಿಗೆ ಕರೆದುಕೊಂಡು ಹೋಗಿ ಅಲ್ಲಿ ಕೊರೋನಾ ಇರುವುದಿಲಲ ಎಂದು ಹೇಳಿ ವಾಪಸ್ಸು ಮನೆ ಬಂದಿದ್ದರು. ನಂತರದಲ್ಲಿ ಅವರಿಗೆ ಜ್ವರ ಬಂದ ಕಾರಣ ಅವರನ್ನು ಶಹಾಪೂರದಲ್ಲಿನ ಸ್ಪಂದನಾ ಆಸ್ಪತ್ರೆಗ ಕರೆದುಕಕೂಂ ಡುಕಿ ಬಂದದ್ದೇವು.

ಶೋರಾಪೂರದಲ್ಲಿ ಸಾಕಷ್ಟು ಆಸ್ಪತ್ರೆಗಳಿದ್ದರೂ ಶಹಾಪೂರಿಗೆ ಯಾವ ಕಾರಣಕ್ಕಾಗಿ ಕರೆದುಕೊಂಡು ಬಂದಿದ್ದೀರಿ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಂಬಂಧಿಕರಾದ ಮಲ್ಲಿಕಾರ್ಜುನ ಪೂಜಾರಿ ಮತ್ತು ಭೂದನೂರು ಶಂಕ್ರಪ್ಪ ಇವರು ಶಹಾಪೂರಿಗೆ ಕರೆದುಕೊಂಡು ಬರುವಂತೆ ಹೇಳಿದ್ದರಿಂದ ನಾವು ನನ್ನ ಗಂಡನನ್ನು ಶಹಾಪೂರ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೇವು ಎಂದು ಹೇಳುತ್ತಾರೆ. ಸದರಿ ಮಲ್ಲಿಕಾರ್ಜುನ ಪೂಜಾರಿ ಮತ್ತು ಭೂದನೂರು ಶಂಕ್ರಪ್ಪ ಈಗ ಜೀವಂತ ಇರುತ್ತಾರೆ. ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ಶಹಾಪೂರ ತಹಶೀಲ್ದಾರ ಕಚೇರಿಯಿಂದ ಪಡೆದುಕೊಂಡಿರುತ್ತೇನೆ. ನಾನು ಮತ್ತು ಹನಮಂತ್ರಾಯ ಇಬ್ಬರು ಲವ್ ಮಾಡಿ ಸವದತ್ತಿ ಯಲ್ಲಮ್ಮನ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿರುತ್ತೇವೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಹನಮಂತ್ರಾಯ ಇವರ ವೈವಾಹಿಕ ಜೀವನದಿಂದ 2 ಮತ್ತು 3 ನೇ ವಾದಿಯರು ಜನಿಸಿರುತ್ತಾರೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಯರನ್ನು ಹನಮಂತ್ರಾಯನೆ ಶಾಲೆಗೆ ಸೇರಿಸಿರುತ್ತಾನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸದರಿ ಹನಮಂತ್ರಾಯ ಇವರ ಸೇವಾ ಪುಸ್ತಕದಲ್ಲಿ ನನ್ನಹೆಸರು ರೇಣುಕಾ ಎಂದು ನಮೂದು ಅಗಿರುತ್ತದೆ. ಸದರಿ ಸೇವಾ ಪುಸ್ತಕದಲ್ಲಿ ನನ್ನ ಹೆಸರು ರೇಣುಕಾ ಎಂದು ನಮೂದಿಸಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳಲ್ಲಿ ರೇಣುಕಾ ಎಂದು ನಮೂದಾಗಿರುವುದಿಲ್ಲ. ನಾನು ಅನಕ್ಷರಸ್ಥಳಾಗಿರುತ್ತೇನೆ. ಸದರಿ ಹನಮಂತ್ರಾಯ ಇವರ LIC Policy ಯಿಂದ ನಾವು ರೂ.16,00,000/- ಹಣ ಪಡೆದುಕೊಂಡಿರುತ್ತೇವೆ. ನಾವು ಶೋರಾಪೂರ ನ್ಯಾಯಾಲಯದಲ್ಲಿ ಸಲ್ಲಿಸಿರುವ P & SC 03/2021 ರಲ್ಲಿ ಈ ದಾವೆಯಲ್ಲಿನ ಪ್ರತಿವಾದಿ ಎಂ. ರೇಣುಕಾ ಮತ್ತು ಉಳಿದ 2 ಮತ್ತು 3 ನೇ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಸದರಿ ಈ ದಾವೆಯಲ್ಲಿ ಪ್ರತಿವಾದಿ ಎಂ. ರೇಣುಕಾ ಮತ್ತು ಉಳಿದ 2 ಮತ್ತು 3 ನೇ ಪ್ರತಿವಾದಿಯರನ್ನು ಆ P & SC ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡದೇ ಅವರಿಗೆ ಆರ್ಥಿಕವಾಗಿ ತೊಂದರೆ ಕೊಡುವ ಉದ್ದೇಶದಿಂದ ನಾವೆ LIC Policy ಗಳನ್ನು ಪಡೇದುಕೊಂಡಿರುತ್ತೇವೆ ಎಂದರೆಸರಿಯಲ್ಲ. ಈ ದಾವೆಯಲ್ಲಿನ 1 ರಿಂದ

3 ನೇ ಪ್ರತಿವಾದಿಯರಿಗೆ Lic Policy ಹಣ ಕೊಡದೆ ಅವರಿಗೆ ಮೋಸ ಮಾಡಿ ನಾವೆ ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಹ ಮುಂದುಎವರೆದು ಆ ಪಾಲಿಸಿಗಳು 2 ಮತ್ತು 3 ನೇ ವಾದಿಯರ ಹೆಸರಿನಲ್ಲಲಿ ಇದ್ದ ಕಾರಣ ನಾವು ಹಣ ಪಡೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ.

3. ಶಹಾಪೂರದ ಶರಣಬಸವೇಶ್ವರ ನಗರದಲ್ಲಿರುವ ಮನೆ ನಂ.62-35 ನೇದನ್ನು ಸದರಿ ಹನಮಂತ್ರಾಯ ಇವರು ತಮ್ಮ ಜೀವಿತ ಕಾಲದಲ್ಲಿ ಖಾಲಿ ನಿವೇಶನ ಖರೀದಿ ಸಂಬಂಧಪಟ್ಟ ನಗರಸಭೆಯಿಂದ ಪರವಾನಿಗೆ ಪಡೆದು ನೆಲಮಹಡಿ ಮತ್ತು ಮೆಲ್ಮಹಡಿ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಹನಮಂತ್ರಾಯ ಇವರ ಮರಣದ ನಂತರ ಸದರಿ ಮನೆಯಲ್ಲಿ ಈ ದಾವೆಯ 1 ರಿಂದ 3 ನೇ ಪ್ರತಿವಾದಿ ಯರು ವಾಸವಾಗಿರುತ್ತಾರೆ ಎಂದರ ಸಾಕ್ಷಿಯು ಅವರು ಮೆಲ್ಮಹಡಿಯಲ್ಲಿ ವಾಸವಾಗಿರುತ್ತಾರೆ ನಾವು ನೆಲಮಹಡಿಯಲ್ಲ ವಾಸವಾಗಿರುತ್ತೇವೆ ಎಂದು ಹೇಳುತ್ತಾರೆ. ಕಳೆದ 4 ವರ್ಷ 3 ತಿಂಗಳ ಹಿಂದೆ ಆ ಮನೆ ಖಾಲಿ ಮಾಡಿ ಒಬ್ಬ ಬಸವರಾಜ ಪೂಜಾರಿ ಇವರಿಗೆ ಬಾಡಿಗೆ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಸದರಿ ನೆಲಮಹಡಿಯಲ್ಲಿ 1 ರಿಂದ 3 ನೇ ಪ್ರತಿವಾದ್ಧಿರು ವಾಸವಾಗಿದ್ದರೂ ಸಹ ಆ ನೆಲಮಹಡಿಯನ್ನು ಬಸವರಾಜ ಪೂಜಾರಿ ಇವರಿಗೆ ಬಾಡಿಗೆಯಿಂದ ಕೊಟ್ಟಿರುತ್ತೇನೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಗೆ ಮತ್ತು ನನ್ನ ಹಾಗೂ ನನ್ನ ಮಕ್ಕಳಿಗೆ ಯಾವುದೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

4. ದಿಗ್ಗಿ ಗ್ರಾಮದಲ್ಲಿ ಹನಮಂತ್ರಾಯ ಇತನು ಒಂದು ಖಾಲಿ ನಿವೇಶನ ಖರೀದಿಸಿ ಒಂದು ಮನೆ ಕಟ್ಟಿರುತ್ತಾನೆ ಎಂದರೆ ಸರಿ. ಅದರ ನಂಬರ 3-52 ಎಂದು ಇರುತ್ತದೆ ಎಂದರೆ ಸರಿ. ಸದರಿ ಮನೆ ಹನಮಂತ್ರಾಯ ತಂದೆ ಮರೆಪ್ಪ ಪೂಜಾರಿ ಭೀ ಗುಡಿ ಇವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯ ಆ ಮನೆ ನನ್ನ ಹೆಸರಿನಲ್ಲಿರುತ್ತದೆ ಎಂದು ಹೇಳುತ್ತಾರೆ. ಸದರಿ ನಿವೇಶವನ್ನು ನಾನು ಒಬ್ಬ ಮಹಾದೇವಪ್ಪ ಚಲವಾದಿ ಎನ್ನುವವರಿಂದ ಖರೀದಿ ಮಾಡಿರುತ್ತೇನೆ. ಸದರಿ ನಿವೇಶವನ್ನು ಅಂದಾಜು 12 ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ಸದರಿ ನಿವೇಶನ ಖರೀದಿ ಪತ್ರ ನೊಂದಣೆ ಆಗಿರುತ್ತದೆ ಆ ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ನಿವೇಶನದಲ್ಲಿ ಕಟ್ಟಿರುವ ಮನೆಯಲ್ಲಿ ಒಬ್ಬ ರಾಜು ಎನ್ನುವವರು

ಬಾಡಿಗೆಯಿಂದ ಇರುತ್ತಾರೆ. ಸದರಿ ಮನೆಯನ್ನೂ ಸಹ ಈ ದಾವೆಯಲ್ಲಿ ಸೇರಿಸಿರುತ್ತೇನೆ. ಈ ದಾವೆ ಸಲ್ಲಿಸುವ ಕಾಲಕ್ಕೆ LIC policy ಗಳನ್ನು ದಾವಾ ಆಸ್ತಿಗಳನ್ನಾಗಿ ತೋರಿಸಿರುವುದಿಲ್ಲ.

5. ಈ ದಾವೆಯಲ್ಲಿನ 1 ನೇ ಪ್ರತಿವಾದಿ ಎಂ. ರೇಣುಕಾ ಇವರು ಹನಮಂತ್ರಾಯನ ಹೆಂಡತಿ ಎಂದು, ಹಾಗೂ 2 ಮತ್ತು 3 ನೇ ಪ್ರತಿವಾದಿಯರು ಹನಮಂತ್ರಾಯನ ಮಗಳು ಮತ್ತು ಮಗ ಎಂದು ತೋರಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಸದರಿ 1 ನೇ ಪ್ರತಿವಾದಿ ರೇಣುಕಾ ಇವರ ವಯಸ್ಸು 41 ವರ್ಷ ಇದಿತ್ತು ಎಂದರೆ ಸರಿ. ಸದರಿ 2 ನೇ ಪ್ರತಿವಾದಿ ಗೌತಮಿ ಇವರಿಗೆ 17 ವರ್ಷ ಅಗಿತ್ತು ಎಂದರೆ ನನಗೆ ಗೊತ್ತಿಲ್ಲ.

6. ಸದರಿ 1 ನೇ ಪ್ರತಿವಾದಿ ಎಂ.ರೇಣುಕಾ ಇವರು ಹನಮಂತ್ರಾಯ ಇತನ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಹ ಮುಂದುವರೆದು ನಾನು ಮೊದಲನೆ ಹೆಂಡತಿಯಾಗಿದ್ದು 1 ನೇ ಪ್ರತಿವಾಯನ್ನು ಹನಮಂತ್ರಾಯ ಮದುವೆ ಮಾಡಿಕೊಂಡಿರುವುದು ನನಗೆ ಗೊತ್ತಾಗಿರಲಿಲ್ಲ ಎಂದು ಹೇಳುತ್ತಾರೆ. ಸದರಿ 2 ಮತ್ತು 3 ನೇ ಪ್ರತಿವಾದಿಯರೇ ಹನಮಂತ್ರಾಯನ ಮಕ್ಕಳು ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿ ಹನಮಂತ್ರಾಯನ ಮೊದಲನೇ ಹೆಂಡತಿ ಹಾಗೂ 2 ಮತ್ತು 3 ನೇ ಪ್ರತಿವಾದಿಯರೇ ಹನಮಂತ್ರಾಯನ ಮಕ್ಕಳು ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸದರಿ 1 ನೇ ಪ್ರತಿವಾದಿ ಹನಮಂತ್ರಾಯನ ಮೊದಲನೇ ಹೆಂಡತಿ ಹಾಗೂ 2 ಮತ್ತು 3 ನೇ ಪ್ರತಿವಾದಿಯರೇ ಹನಮಂತ್ರಾಯನ ಮಕ್ಕಳು ಆಗಿರುವುದಿಲ್ಲ ಎಂದು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರೇಣುಕಾ ಹನಮಂತ್ರಾಯನ ಕಾನೂನು ಭದ್ದ ಹೆಂಡತಿಯಾಗಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಹನಮಂತ್ರಾಯನ ಇತನ ಜೀವಿತ ಕಾಲಕ್ಕೆ ಅತನ ಸೇವಾ ಪುಸ್ತಕದಲ್ಲಿ ಆತನ ಹೆಂಡತಿ ಹೆಸರು ರೇಣುಕಾ ಎಂದು ನಮೂದು ಮಾಡಿರುವುದು ಆ ರೇಣುಕಾ ಎಂದರೆ ಈ ದಾವೆಯಲ್ಲಿನ 1 ನೇ ಪ್ರತಿವಾದಿ ಎಂದರೆ ಸರಿಯಲ್ಲ. ಪ್ರತಿವಾದಿಯರಿಡಿಗೆ ತೊಂದರೆ ಕೂಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹನಮಂತ್ರಾಯ ಇತನ ಮರಣದ ನಂತರ ಸಿಗಬಹುದಾದ ಆರ್ಥಿಕ ಸೌಲಭ್ಯ ಪಡೆದುಕೊಳ್ಳಲು 1 ರಿಂದ 3 ನೇ ಪ್ರತಿವಾದಿಯರು ಮಾತ್ರ ಅರ್ಹರು ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿ 10 ನೇ ತರಗತಿಯವರೆಗೆ ಓದಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.